

# ಛದ್ಮವೇಷ

■ ಚಿತ್ರ– ಲೇಖನ: **ಶ್ರೀರಂಜನ್ ಟಿ**

ವಿಸ್ತಾರವಾಗಿ ನಮ್ಮೆದುರೇ ಹರಡಿ ನಿಂತಿರುವ ನೀಲಾಕಾಶ, ಅಲ್ಲಿ ತೇಲುವ ಕರಿ–ಬಿಳಿ ಮೋಡಗಳು, ಕಾಮನಬಿಲ್ಲಿನ ಬಣ್ಣಗಳು, ಸುರಿವ ಮಳೆ, ಗುಡುಗು–ಮಿಂಚು, ಕತ್ತಲಿನಾಗಸದಲ್ಲಿ ಬೆಳ್ಳಗೆ ಹೊಳೆವ ಚಂದಿರ ಮತ್ತು ಚುಕ್ಕಿ ತಾರೆಗಳು...– ಅದೆಷ್ಟು ವಿಸ್ಮಯಗಳು! ಉತ್ತರ ಹುಡುಕುತ್ತ ಅಷ್ಟಿಷ್ಟು ತಿಳಿದುಕೊಂಡಿದ್ದೇವಾದರೂ ಇದೆಲ್ಲ ಹೇಗೆ ಸಾಧ್ಯ? ಯಾಕೆ ಹೀಗೆಯೇ ಇದೆ? ಎಂಬ ಪ್ರಶ್ನೆಗಳು ಮತ್ತಷ್ಟು ಮೋಡಿ ಮಾಡಿ ಮೂಕವಿಸ್ಮಿತರನ್ನಾಗಿಸುತ್ತವೆ.

ಇಲ್ಲಿನ ಪ್ರತಿಯೊಂದೂ ಒಂದೊಂದು ರೀತಿಯಲ್ಲಿ ಒಂದೊಂದು ಬಣ್ಣ ಬಳಿದು ಕುಳಿತಿದೆ. ಏನಿರಬಹುದು ಅವುಗಳ ಹಿಂದಿನ ಮರ್ಮ? ಒಂದು ದಿನ ಆ ಸೃಷ್ಟಿಯೇ ಎದ್ದು ಬಂದು 'ಒಂದಾನೊಂದು ಕಾಲದಲ್ಲಿ...' ಎಂದು ಕತೆ ಹೇಳಲು ಶುರು ಮಾಡಬೇಕಷ್ಟೆ. ಹಾಗಾಗುವುದುಂಟೆ? ಆದರೆ ಅಷ್ಟೆಲ್ಲ ತಲೆಕೆಡಿಸಿಕೊಳ್ಳದೆಯೂ, ಕುತೂಹಲಕಾರಿಯಾದ ಜೊತೆಗೆ ಹೊಸತಾದ ಹೊಳಹುಗಳಿರುವ ಅದೆಷ್ಟೋ ಸಂಗತಿಗಳನ್ನು ನಮ್ಮದಾಗಿಸಿಕೊಳ್ಳಬಹುದು.

★★★

ಜಿ. ವೆಂಕಟಸುಬ್ಬಯ್ಯನವರು ಸಂಪಾದಿಸಿದ ಕನ್ನಡ ಶಬ್ದಾರ್ಥ ಕೋಶದಲ್ಲಿರುವಂತೆ ವೇಷ ಎಂದರೆ 1.ಉಡುಗೆ, ಅಲಂಕಾರ; 2. ಗುರುತು ತಿಳಿಯದಂತೆ ರೂಪ ಬದಲಾವಣೆ ಮಾಡಿಕೊಳ್ಳುವುದು; 3. ಸೋಗು, ಬೂಟಾಟಿಕೆ. ಛದ್ಮ ಎಂದರೆ 1.ವೇಷವನ್ನು ಮಾರ್ಪಡಿಸುವುದು, ವೇಷಾಂತರ; 2.ಕಪಟ, ಮೋಸ; 3.ಕಾರಣ, ನೆಪ.

ಛದ್ಮವೇಷ (ಕ್ಯಾಮೊಫ್ಲಾಜ್) ಎಂದರೇನು.. ಎಂಬುದನ್ನು ಸರಳವಾಗಿ ಈ ಪದಗಳೇ ಹೇಳುತ್ತಿವೆ. ಛದ್ಮವೇಷದ ಮುಖ್ಯ ಉದ್ದೇಶ ಗುರುತಿಸುವಿಕೆಯನ್ನು ತಡೆಹಿಡಿಯುವುದು (ಅಥವಾ ಸಾಧ್ಯವಾದಷ್ಟು ಹೊತ್ತು ತಡೆಹಿಡಿಯುವುದು). ಛದ್ಮವೇಷ ನಮ್ಮ ನಿತ್ಯ ಬದುಕಲ್ಲೂ ಹಾಸು ಹೊಕ್ಕಿರುತ್ತದೆ. ಇಲ್ಲಿದೆ ಎರಡು ಉದಾಹರಣೆಗಳು:

★ ಅಮ್ಮ ಯಾವತ್ತೋ ನೆಟ್ಟಿದ್ದ ಗುಲಾಬಿ ಗಿಡದಲ್ಲಿ ಹೂಗಳಾಗಲು ಶುರುವಾಗಿತ್ತು. ದಿನವೂ ಎಷ್ಟೆಷ್ಟು ಹೂಗಳರಳಿವೆ ಎಂದು ಅಮ್ಮ ನೋಡುತ್ತಿದ್ದಳು. ಒಂದು ದಿನ ಗಿಡವನ್ನು ನೋಡಿ 'ಗಿಡದಲ್ಲಿ ಹೂಗಳು ಮಾತ್ರ ಇವೆ, ಎಲೆಗಳೆಲ್ಲ ಕಾಣೆಯಾಗುತ್ತಿವೆ, ಯಾವುದೋ ಕೀಟ ತಿನ್ನುತ್ತಿರಬೇಕು' ಎಂದು ಸಿಟ್ಟುಗೊಂಡು ಬಹಳಷ್ಟು ಹುಡುಕಾಡಿದರೂ ಅವಳಿಗೆ ಯಾವ ಕೀಟವೂ ಕಾಣಲೇ ಇಲ್ಲ. ವಾಸ್ತವವಾಗಿ ಆ ಕೀಟ ಅಲ್ಲುಳಿದಿದ್ದ ಎಲೆಯೊಂದರ ಮೇಲೆ ಕಾಣುವಂತೆಯೇ ಕುಳಿತಿತ್ತು.

(38ನೇ ಪುಟ ನೋಡಿ)